ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 47-50
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬಸವಣ್ಣ ಮತ್ತು ಅಲ್ಲಮರ ವಚನಗಳಲ್ಲಿ ದೇವಾಲಯದ ನಿರಾಕರಣೆ

**ಪ್ರಕಾಶ ಎಸ್**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**Abstract:**
*ವಚನ ಸಾಹಿತ್ಯ ಚಳವಳಿಯ ಮೇರು ವ್ಯಕ್ತಿತ್ವಗಳಲ್ಲಿ ಬಸವಣ್ಣ ಮತ್ತು ಅಲ್ಲಮರು ಪ್ರಖ್ಯಾತರಾದವರು. ಸಮಕಾಲೀನ ವಚನಕಾರರಿಗೆ ಪ್ರೇರಣೆಯಾದವರು ಮತ್ತು ಪ್ರಭಾವ ಬೀರಿದವರಲ್ಲಿ ಪ್ರಮುಖರು. ವಚನಕಾರರು ಬಡತನದ ಹಿನ್ನೆಲೆಯಿಂದ ಸಾಹಿತ್ಯ ರಚನೆಗೆ ತೊಡಗಿಸಿಕೊಂಡವರು. ಅವರ ಹಲವು ವಚನಗಳಲ್ಲಿ ದೇವಾಲಯದ ನಿರಾಕರಣೆ ಪ್ರಮುಖವಾಗಿ ಕಂಡುಬರುತ್ತದೆ. ಶ್ರೀಮಂತ ವರ್ಗದ ಜನತೆ ಬಡಜನರನ್ನು ಶೋಷಿಸುತ್ತಾ ದೇವಾಲಯಗಳನ್ನು ನಿರ್ಮಿಸುವುದು ಮತ್ತು ದೇವಾಲಯಗಳಿಂದ ಸಂಪತ್ತನ್ನು ಕ್ರೂಢೀಕರಿಸುವುದು ಇದರಿಂದ ಸಮಾಜದಲ್ಲಿ ಆರ್ಥಿಕ ಅಸಮಾನತೆ ಉಂಟಾಗುತ್ತದೆ. ಈ ಅಸಮಾನತೆಯನ್ನು ನಿವಾರಿಸಬೇಕೆಂಬುದು ವಚನಕಾರರ ಆಶಯವಾಗಿದೆ.*

**Keywords:** *ವಚನ ಸಾಹಿತ್ಯ, ಶಿವಶರಣರು, ಬಸವಣ್ಣ, ಅಲ್ಲಮ, ದೇವಾಲಯ ನಿರಾಕರಣೆ.*

## ಪೀಠಿಕೆ

ಶ್ರೀಮಂತರು ಸಂಪತ್ತನ್ನು ಅಪವ್ಯಯ ಮಾಡುತ್ತ ಗುಡಿ, ದೇವಾಲಯಗಳನ್ನು ಸ್ಥಾಪಿಸಿ ಸಂಪತ್ತನ್ನು ವ್ಯರ್ಥವಾಗಿ ಅಪವ್ಯಯ ಮಾಡುವುದನ್ನು ವಚನಕಾರರು ನಿರಾಕರಿಸಿದ್ದಾರೆ. ಈ ಕುರಿತು ಬಸವಣ್ಣನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

***"ಉಳ್ಳವರು ಶಿವಾಲಯವ ಮಾಡಿಹರು!***
***ನಾನೇನ ಮಾಡುವೆ? ಬಡವನಯ್ಯಾ!***
***ಎನ್ನ ಕಾಲೇಕಂಬ, ದೇಹವೇ ದೇಗುಲ,***
***ಶಿರವೇ ಹೊನ್ನ ಕಳಶವಯ್ಯಾ!***
***ಕೂಡಲಸಂಗಮದೇವ ಕೇಳಯ್ಯಾ,***
***ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ"*** [1]

ಉಳ್ಳವರು ಸ್ಥಾಪಿಸುವ ದೇವಾಲಯಗಳು ಮೌಢ್ಯ ಮತ್ತು ಕಂದಾಚಾರಗಳಿಂದ ಕೂಡಿರುತ್ತವೆ. ಇಂತಹ ಬಾಹ್ಯ ಆಚರಣೆಗಳಿಂದ ಸಮಾಜದ ಬಡಜನತೆಗೆ ಯಾವುದೇ ಪ್ರಯೋಜನಗಳಿಲ್ಲ. ಇಡಿ ದೇಹವನ್ನೇ ದೇವಾಲಯಕ್ಕೆ ಹೋಲಿಸಿಕೊಳ್ಳುವ, ಆ ಮೂಲಕ ದೇವಾಲಯವನ್ನು ನಿರಾಕರಿಸುವ ಬಗೆ ವಚನಕಾರರದಾಗಿದೆ. ಬಸವಣ್ಣನ 'ನಾನೇನ ಮಾಡುವೆ? ಬಡವನಯ್ಯಾ!' ಎಂಬ ಮಾತಿನಿಂದ ಆ ಕಾಲಘಟ್ಟದಲ್ಲಿ ವಚನಕಾರರು ಎದುರಿಸಿದ ಬಡತನದ

[1] ಬಸವರಾಜು, ಎಲ್. (ಸಂ.). (2023). ಬಸವಣ್ಣನವರ ವಚನಗಳು. (ಹತ್ತೊಂಭತ್ತನೇ ಮುದ್ರಣ). ಸಪ್ನ ಬುಕ್ ಹೌಸ್ ಪುಟ. 170.

***Please cite this article as:*** ಪ್ರಕಾಶ ಎಸ್. (2024). ಬಸವಣ್ಣ ಮತ್ತು ಅಲ್ಲಮರ ವಚನಗಳಲ್ಲಿ ದೇವಾಲಯದ ನಿರಾಕರಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(4), 47–50

ಬದುಕನ್ನು ಗುರುತಿಸಬಹುದಾಗಿದೆ. ಹೀಗೆ ಉಳ್ಳವರು ಸ್ಥಾಪಿಸುವ ದೇವಾಲಯಗಳು ಸ್ಥಾವರ ರೂಪವಾದವು. ಅವು ಇದ್ದಲ್ಲೇ ಇರುವಂತಹವು ಚಲನಶೀಲವಲ್ಲದ ಅವುಗಳು ಇಂದಲ್ಲ ನಾಳೆ ಹಾಳಗುತ್ತವೆ. ಆದರೆ ಜಂಗಮ ಎಂದರೆ ಸದಾ ಚಲನಶೀಲ, ಆದ್ದರಿಂದ ಅದು ನಾಶವಾಗದುದಾಗಿದೆ. ಅಂತೆಯೇ ಜಡಸ್ವರೂಪವಾದ ಸ್ಥಾವರ ಸಂಕೇತವಾದ ದೇವಾಲಯಗಳನ್ನು ಹಲವು ವಚನಕಾರರು ನಿರಾಕರಿಸಿರುವುದು ಕಂಡುಬರುತ್ತದೆ. ಈ ಕುರಿತು ಬಸವಣ್ಣನ ಮತ್ತೊಂದು ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

*"ಕಲ್ಲನಾಗರ ಕಂಡರೆ ಹಾಲನೆರೆಯೆಂಬರು*
*ದಿಟದ ನಾಗನ ಕಂಡರೆ ಕೊಲ್ಲೆಂಬರಯ್ಯ!"*[2]

ಸ್ಥಾವರ ಪೂಜೆ ಮತ್ತು ಮೂಢನಂಬಿಕೆಯ ನಿರಾಕರಣೆಯು ಬಸವಣ್ಣನ ಪ್ರಮುಖ ವೈಚಾರಿಕ ಧೋರಣೆಯಾಗಿದೆ. ಅಂತೆಯೇ ದೇವಾಲಯಗಳಿಗಾಗಿ ದಾನ, ದತ್ತಿ ಬಿಡುತ್ತಿದ್ದ ಅಂದಿನ ಶ್ರೀಮಂತ ವರ್ಗವನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ಅತ್ಯಂತ ಕಟುವಾಗಿ ಟೀಕಿಸಿದ್ದಾರೆ, ಈ ಕುರಿತು ಬಸವಣ್ಣನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

*"ಹತ್ತು ಮತ್ತರ ಭೂಮಿ,*
*ಬತ್ತದ ಹಯನು, ನಂದಾದೀವಿಗೆಯ*
*ನಡೆಸಿಹೆನೆಂಬವರ ಮುಖವ ನೋಡಲಾಗದು!*
*ಅವರ ನುಡಿಯ ಕೇಳಲಾಗದು,"* [3]

ದೇವಾಲಯಗಳಲ್ಲಿ ಪ್ರತಿಷ್ಠೆಗಾಗಿ ದಾನ ಮತ್ತು ದತ್ತಿಯ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ ಮತ್ತು ಜನಸಾಮಾನ್ಯರ ಮೇಲೆ ನಡೆಯುತ್ತಿದ್ದ ಸಾಮಾಜಿಕ ತಾರತಮ್ಯಗಳನ್ನು ಮನಗಂಡಿದ್ದ ಬಸವಣ್ಣನವರು ದೇವಾಲಯ ಸಂಸ್ಕೃತಿಯನ್ನು ನಿರಾಕರಿಸಿರುವುದು ಮಹತ್ತರವಾದುದಾಗಿದೆ.

ವಚನಕಾರರು ಜಂಗಮತ್ತ್ವಕ್ಕೆ ಮಹತ್ವ ನೀಡಿ ಸ್ಥಾವರ ರೂಪವಾದ ಮತ್ತು ಶೋಷಣೆಯ ಮೂಲಗಳಾದ ದೇವಾಲಯಗಳನ್ನು ನಿರಾಕರಿಸಿದ್ದಾರೆ. ಈ ಕುರಿತು ಅಲ್ಲಮನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

*"ಕಾಲೇ ಕಂಭಗಳಾದವೆನ್ನ*
*ದೇಹವೆ ದೇಗುಲವಾದುದಯ್ಯ!*
*ಎನ್ನ ನಾಲಗೆಯೆ ಘಂಟೆ*
*ಶಿರ ಸುವರ್ಣದ ಕಳಸವಿದೇನಯ್ಯ!*
*ಸ್ವರವೇ ಲಿಂಗಕ್ಕೆ ಸಿಂಹಾಸನವಾಗಿರ್ದುದು!*
*ಗುಹೇಶ್ವರ"* [4]

ಅಲ್ಲಮಪ್ರಭು ಈ ವಚನದಲ್ಲಿ ದೇಹವನ್ನು ದೇವಾಲಯಕ್ಕೆ ಹೋಲಿಸಿರುವ ಪರಿ ವ್ಯಕ್ತಗೊಂಡಿದೆ. ಆ ಮೂಲಕ ಬಾಹ್ಯ ಜಗತ್ತಿನ ಜಡ ದೇವಾಲಯಗಳನ್ನು ನಿರಾಕರಿಸುವ ಬಗೆ ಪ್ರಮುಖವಾದುದಾಗಿದೆ. ಅಲ್ಲಮನ ಈ ವಚನ ಬಸವಣ್ಣನ ಉಳ್ಳವರು ಶಿವಾಲಯವ ಮಾಡಿಹರು! ಎಂಬ ವಚನದ ಧೋರಣೆಯನ್ನು ಹೋಲುತ್ತದೆ. ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆಂಬ ನಿಲುವು ಅಲ್ಲಮನದು. ಈ ಕುರಿತು ನಿದರ್ಶನಕ್ಕೆ ಅಲ್ಲಮನ ವಚನವನ್ನು ಗಮನಿಸಬಹುದು.

*"ದೇಹದೊಳಗೆ ದೇವಾಲಯವಿದ್ದು*
*ಮತ್ತೆ ಬೇರೆ ದೇಗುಲವೇಕಯ್ಯಾ?*
*ಎರಡಕ್ಕೆ ಹೇಳಲಿಲ್ಲಯ್ಯಾ.*
*ಗುಹೇಶ್ವರ ನೀನು ಕಲ್ಲಾದಡೆ ನಾನು ಏನಪ್ಪೆನು?"* [5]

[2] ಬಸವರಾಜು, ಎಲ್. (ಸಂ.) (2023). ಬಸವಣ್ಣನವರ ವಚನಗಳು. (ಹತ್ತೊಂಭತ್ತನೇ ಮುದ್ರಣ). ಸಪ್ನ ಬುಕ್ ಹೌಸ್ ಪುಟ. 81

[3] ಅದೇ. ಪುಟ. 88.

[4] ಬಸವರಾಜು, ಎಲ್. (ಸಂ.). (2022). ಅಲ್ಲಮನ ವಚನಗಳು. (ಹನ್ನೊಂದನೇ ಮುದ್ರಣ). ಪುಟ. 108.

[5] ಸಿದ್ದರಾಮ ಶರಣರು ಬೆಲ್ದಾಳ. (ಸಂ.) (2021). *ಅಲ್ಲಮ ಪ್ರಭುದೇವರ ವಚನಸಂಪುಟ, ಸಮಗ್ರ ವಚನಸಂಪುಟ–2,* (ನಾಲ್ಕನೆಯ ಮುದ್ರಣ). ಪುಟ. 77.

ದೇಹವೆ ನಿಸರ್ಗ ಸೃಷ್ಟಿಯ ಸುಂದರ ದೇವಾಲಯ ಅದನ್ನು ಬಿಟ್ಟು ಮತ್ತೆ ಬೇರೆ ದೇವಾಲಯವೇಕೆಂಬ ನಿಲುವು ಅಲ್ಲಮನದು. ದೇಹವೆ ಬೇರೆ, ದೇವಾಲಯವೆ ಬೇರೆ ಎಂಬ ದ್ವಂದ್ವ ಸಲ್ಲದು. ಅಂತೆಯೇ ಗುಡಿಯನ್ನು ಕಟ್ಟಿ ಆ ಗುಡಿಯೊಳಗೆ ಕಲ್ಲಿನಲ್ಲಿ ರೂಪುಗೊಂಡ ಲಿಂಗವನ್ನು ಸ್ಥಾಪಿಸಿ ಆರಾಧಿಸುವುದು ಅರ್ಥವಿಲ್ಲದ್ದು. ಇದೇ ಬಗೆಯ ನಿಲುವನ್ನು ತಳೆಯುವ ಅಲ್ಲಮನ ಮತ್ತೊಂದು ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

*"ಕಲ್ಲಮನೆಯ ಮಾಡಿ*
*ಕಲ್ಲದೇವರಮಾಡಿ*
*ಆಕಲ್ಲು ಕಲ್ಲ ಮೇಲೆ ಕಡೆದಡೆ*
*ದೇವರೆತ್ತ ಹೋದರೋ?*
*ಲಿಂಗಪ್ರತಿಷ್ಠೆಯ ಮಾಡಿದವರಿಗೆ*
*ನಾಯಕ ನರಕ ಗುಹೇಶ್ವರ"* [6]

ಕಲ್ಲಿನ ದೇವಾಲಯ ಮತ್ತು ಕಲ್ಲಿನ ದೇವರನ್ನು ಅಲ್ಲಮ ನಿರಾಕರಿಸಿರುವುದು ಪ್ರಮುಖವಾದುದು. ಅಂತೆಯೇ ಈ ಬಾಹ್ಯ ದೇವಾಲಯ ಮತ್ತು ದೇವರುಗಳನ್ನು ಸ್ಥಾಪಿಸಿದವರು ಕೆಟ್ಟ ನರಕ ಹೊಂದುವರು ಎಂಬುದಾಗಿ ಈ ವಚನದಲ್ಲಿ ತಿಳಿಸಿದ್ದಾನೆ. ದೇಗುಲವಾಗಲಿ, ಅದರೊಳಗೆ ಸ್ಥಾಪಿಸಿರುವ ದೇವರಾಗಲಿ ಅವು ಕೇವಲ ಬಾಹ್ಯ ರಚನೆಗಳು. ಸಿರಿವಂತಿಕೆಯ ಸಂಕೇತವಾದ ಈ ಬಾಹ್ಯ ರಚನೆಗಳಾದ ದೇವಾಲಯಗಳ ಮತ್ತು ದೇವರ ನಿರಾಕರಣೆಯು ವಚನಕಾರರಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ತನ್ನ ದೇಹವನ್ನೇ ದೇವಾಲಯಕ್ಕೆ ಹೋಲಿಸಿಕೊಳ್ಳುವ ಮತ್ತು ದೇವಾಲಯವನ್ನು ನಿರಾಕರಿಸುವ ಬಗೆ ವಚನಕಾರ ಗುರುಪುರದ ಮಲ್ಲಯ್ಯನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

[6] ಅದೇ.ಪುಟ.77

*"ಎನ್ನ ಪಾದವೆ ಪದಶಿಲೆಯಾಗಿ*
*ಕಾಲೆ ಕಡಹದ ಕಂಬಂಗಳಾಗಿ*
*ತೋಳೆ ನಾಗವೇದಿಕೆಯಾಗಿ*
*ಅಸ್ಥಿಯೆ ಸುತ್ತಳ ಜಂತಿಯಾಗಿ*
*ಅಧರವೆ ಒಳಬಾಗಿಲಾಗಿ*
*ಗುರುಕರುಣವೆ ಲಿಂಗವಾಗಿ*
*ಅಂಗವೆ ರಂಗಮಧ್ಯವಾಗಿ*
*ಹೃದಯ ಕಮಲವೆ ಪೂಜೆಯಾಗಿ*
*ಕಿವಿಗಳೆ ಕೀರ್ತಿಮುಖವಾಗಿ*
*ನೆನೆವ ನಾಲಗೆಯೆ ಘಂಟೆಯಾಗಿ*
*ಶಿರವೆ ಸುವರ್ಣದ ಕಳಸವಾಗಿ*
*ನಯನವೆ ಕುಂದದ ಜ್ಯೋತಿಯಾಗಿ*
*ಚರ್ಮವೆ ನಿರ್ಮಲ ಹೊದಕೆಯಾಗಿ*
*ನೆನಹೆ ನಿಮಗೆ ಉಪಾಹಾರವಾಗಿ*
*ಗುರುಪುರದ ಮಲ್ಲಯ್ಯನಿದ್ದನಾಗಿ"* [7]

ದೇವಾಲಯಗಳನ್ನು ನಿರಾಕರಿಸುವುದರ ಜೊತೆಗೆ ದೇವಾಲಯದ ಆಚರಣೆಗಳಾದ ಪೂಜೆ ಇತ್ಯಾದಿಗಳನ್ನು ನಿರಾಕರಿಸಿರುವುದು ವಚನಕಾರರ ಪ್ರಮುಖ ಧೋರಣೆಯಾಗಿದೆ. ಈ ಕುರಿತು ಅಲ್ಲಮನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

*"ಎನ್ನ ಹೃದಯ ಕಮಲ ಮಧ್ಯದಲ್ಲಿ*
*ಮೂರ್ತಿಗೊಂಡಿಪ್ಪ ಎನ್ನ ಪ್ರಾಣೇಶ್ವರಂಗೆ*
*ಎನ್ನ ಕ್ಷಮೆಯೆ ಅಭಿಷೇಕ*
*ಎನ್ನ ಪರಮ ವೈರಾಗ್ಯವೆ ಪುಷ್ಪದಮಾಲೆ*
*ಎನ್ನ ಸಮಾಧಿ ಸಂಪತ್ತೆ ಗಂಧ*
*ಎನ್ನ ನಿರಹಂಕಾರವೆ ವಸ್ತ್ರ*
*ಎನ್ನ ಸತ್ವವೆ ದಿವ್ಯಾಭರಣ*
*ಎನ್ನ ವಿಶ್ವಾಸವೆ ಧೂಪ*
*ಎನ್ನ ದಿವ್ಯಜ್ಞಾನವೆ ದೀಪ*
*ಎನ್ನ ನಿಭ್ರಾಂತಿಯೆ ನೈವೇದ್ಯ*

[7] ರವೀಂದ್ರನಾಥ, ಕೆ. (2021). (ಸಂ.) *ಗುರುಪುರದ ಮಲ್ಲಯ್ಯನ ವಚನ, ಸಮಗ್ರ ವಚನಸಂಪುಟ–7.* (ನಾಲ್ಕನೆಯ ಮುದ್ರಣ).

***ಎನ್ನ ನಿರ್ವಿಷಯವೆ ತಾಂಬೂಲ***
***ಎನ್ನ ಮೌನವೆ ಘಂಟೆ,***
***ಎನ್ನ ನಿರ್ವಿಕಲ್ಪನೆಯೇ ಪ್ರದಕ್ಷಿಣೆ,***
***ಎನ್ನ ಶುದ್ಧಿಯೇ ನಮಸ್ಕಾರ,***
***ಎನ್ನ ಅಂತಃಕರಣದಿಂ ಮಾಡುವ ಸೇವೆಯೇ ಉಪಚಾರಂಗಳು***
***ಈ ಪರಿಯಲ್ಲಿ ಎಮ್ಮ ಗುಹೇಶ್ವರ ಲಿಂಗಕ್ಕೆ***
***ಪ್ರಾಣ ಪೂಜೆಯ ಮಾಡಿ ಬಾಹ್ಯಕ್ರೀಯ ಮರೆದೆನು"***[8]

ಅಲ್ಲಮರ ಈ ವಚನದಲ್ಲಿ ದೇವಾಲಯದಲ್ಲಿನ ಬಾಹ್ಯ ಆಚರಣೆಗಳನ್ನು ನಿರಾಕರಿಸಿರುವುದು ಕಂಡುಬರುತ್ತದೆ. ಸಿರಿವಂತಿಕೆಯ ಸಂಕೇತಗಳಾದ ದೇವಾಲಯಗಳಲ್ಲಿನ ಆಚರಣೆಗಳು ಶ್ರೀಮಂತಿಕೆ ಮತ್ತು ವೈಭವದಿಂದ ಕೂಡಿರುತ್ತವೆ, ಈ ರೀತಿಯ ಸಿರಿವಂತರ ಬಾಹ್ಯ ಆಚರಣೆಗಳಿಂದ ಸಮಾಜಕ್ಕೆ ಯಾವುದೇ ಪ್ರಯೋಜನಗಳಿಲ್ಲ. ಆದ್ದರಿಂದ ವಚನಕಾರರು ದೇವಾಲಯಗಳ ಮತ್ತು ಅಲ್ಲಿನ ಆಚರಣೆಗಳನ್ನು ನಿರಾಕರಿಸಿದ್ದಾರೆ. ವಚನಾಕಾರರು ಸಿರಿವಂತರ ಆಢಂಬರದ, ತೋರಿಕೆಯ ಆಚರಣೆಗಳಾದ ಅಭಿಷೇಕ, ಪುಷ್ಪದಮಾಲೆ, ಗಂಧ, ವಸ್ತ್ರ, ದಿವ್ಯಾಭರಣ, ಧೂಪ, ದೀಪ, ನೈವೇದ್ಯ, ತಾಂಬೂಲ, ಘಂಟೆ, ಇತ್ಯಾದಿಗಳನ್ನು ನಿರಾಕರಿಸಿರುವುದು ಮಹತ್ವವಾದುದಾಗಿದೆ.

ವಚನಕಾರರ ದೇವಾಲಯ ಮತ್ತು ಅವುಗಳಲ್ಲಿನ ಬಾಹ್ಯ ಆಚರಣೆಗಳ ನಿರಾಕರಣೆಯು ಸಿರಿವಂತರ ಶ್ರೀಮಂತಿಕೆಯ ಆಚರಣೆ ಮತ್ತು ಆಢಂಬರಗಳ ನಿರಾಕರಣೆಯೂ ಆಗಿದೆ. ವಚನಕಾರರು ಬಡತನದ ಬದುಕಿನಿಂದ ಸಾಹಿತ್ಯ ಕ್ರಾಂತಿಗೆ ತೊಡಗಿಕೊಂಡವರು ಅವರಿಗೆ ದೇಹವೇ ದೇವಾಲಯ, ಸರಳ ನಿರ್ಮಲ ಭಕ್ತಿಯೇ ಶಾಶ್ವತವಾದುದಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ದೇವಾಲಯಗಳ, ಗುಡಿ–ಗೋಪುರಗಳ, ಪ್ರತಿಮೆಗಳ ನಿರ್ಮಾಣಕ್ಕಾಗಿಯೇ ತಮ್ಮ ಬಹುಪಾಲು ಆಯವ್ಯಯವನ್ನು ಸರಕಾರಗಳು ಮೀಸಲಾಗಿಟ್ಟಿರುವುದನ್ನು ಗಮನಿಸಬಹುದು. ಇವುಗಳಿಂದ ಜನಸಾಮಾನ್ಯರಿಗೆ ಯಾವುದೇ ಪ್ರಯೋಜನಗಳಿಲ್ಲವೆಂಬುದು ಅತ್ಯಂತ ಪ್ರಮುಖವಾದುದು,ಇದನ್ನು ಹನ್ನೆರಡನೆಯ ಶತಮಾನದಲ್ಲಿಯೇ ಮನಗಂಡಿದ್ದ ಬಸವಣ್ಣ ಮತ್ತು ಅಲ್ಲಮಪ್ರಭುಗಳಾದಿಯಾಗಿ ಅನೇಕ ವಚನಕಾರರು ತಮ್ಮ ವಚನಗಳಲ್ಲಿ ಸಿರಿವಂತಿಕೆಯ, ಶೋಷಣೆಯ, ಸಂಕೇತಗಳಾದ ದೇವಾಲಯಗಳನ್ನು ನಿರಾಕರಿಸಿರುವುದು ಮಹತ್ತರವಾದುದಾಗಿದೆ.

**ಆಕರ ಗ್ರಂಥಗಳು**


- ಬಸವರಾಜು, ಎಲ್. (ಸಂ.). (2023). ಬಸವಣ್ಣನವರ ವಚನಗಳು. (ಹತ್ತೊಂಭತ್ತನೇ ಮುದ್ರಣ). ಸಪ್ನ ಬುಕ್ ಹೌಸ್.
- ಬಸವರಾಜು, ಎಲ್. (ಸಂ.). (2022). ಅಲ್ಲಮನ ವಚನಗಳು. (ಹನ್ನೊಂದನೇ ಮುದ್ರಣ). ಸಪ್ನ ಬುಕ್ ಹೌಸ್.
- ರವೀಂದ್ರನಾಥ, ಕೆ. (2021). (ಸಂ.) *ಗುರುಪುರದ ಮಲ್ಲಯ್ಯನ ವಚನ, ಸಮಗ್ರ ವಚನಸಂಪುಟ–7.* (ನಾಲ್ಕನೆಯ ಮುದ್ರಣ). ಕನ್ನಡ ಪುಸ್ತಕ ಪ್ರಾಧಿಕಾರ.
- ಸಿದ್ದರಾಮ ಶರಣರು ಬೆಲ್ದಾಳ. (ಸಂ.) (2021). *ಅಲ್ಲಮ ಪ್ರಭುದೇವರ ವಚನಸಂಪುಟ, ಸಮಗ್ರ ವಚನಸಂಪುಟ–2,* (ನಾಲ್ಕನೆಯ ಮುದ್ರಣ). ಕನ್ನಡ ಪುಸ್ತಕ ಪ್ರಾಧಿಕಾರ.


[8] ಸಿದ್ದರಾಮ ಶರಣರು ಬೆಲ್ದಾಳ. (ಸಂ.) (2021). ಪೂರ್ವೋಕ್ತ. ಪುಟ. 365–366.